# ಆ್ಯಪಲ್ ಟೀವಿ ಪಡೆದೀತೆ ಠೀವಿ



ಭಾರತದ ಮನರಂಜನಾ ಕ್ಷೇತ್ರಕ್ಕೆ 'ಆ್ಯಪಲ್' ಕಾಲಿಟ್ಟಿದೆ. ಈಗಾಗಲೇ ಅಮೆಜಾನ್ ಪ್ರೈಮ್, ನೆಟ್‌ಫ್ಲಿಕ್ಸ್‌ಗಳು ಭಾರತದ ಮಧ್ಯಮವರ್ಗದವರಿಗೆ ಚಿರಪರಿಚಿತ. ಇವುಗಳ ಸಾಲಿನಲ್ಲಿ ತಾನೂ ಸೇರಿಕೊಳ್ಳುವ ಪ್ರಯತ್ನ 'ಆ್ಯಪಲ್ ಟಿವಿ+'ಯದು. ಆದರೆ, ಸದ್ಯಕ್ಕೆ ಆ್ಯಪಲ್ ಬುಟ್ಟಿಯಲ್ಲಿರುವ ಕಾರ್ಯಕ್ರಮಗಳು ಇಂಗ್ಲಿಷ್‌ಗೆ ಮಾತ್ರ ಸೀಮಿತ. ಬುಟ್ಟಿಯಲ್ಲಿನ ವೈವಿಧ್ಯ ಹೆಚ್ಚಿದರಷ್ಟೇ ಸ್ಪರ್ಧೆ ರಂಗೇರಲು ಸಾಧ್ಯ.

■ **ವಿಜಯ್ ಜೋಷಿ**

ಭಾರತದ 'ವಿಡಿಯೊ ಆನ್ ಡಿಮಾಂಡ್' ಮಾರುಕಟ್ಟೆಯ ಮೌಲ್ಯ 2018ನೆಯ ಆರ್ಥಿಕ ವರ್ಷದಲ್ಲಿ ₹ 2,150 ಕೋಟಿ ಆಗಿತ್ತು. ಹಾಲಿ ಆರ್ಥಿಕ ವರ್ಷದಲ್ಲಿ ಅದು ₹ 3,500 ಕೋಟಿ ಆಗಲಿದೆ ಎಂಬ ಅಂದಾಜು ಇದೆ. ಇಷ್ಟು ದೊಡ್ಡದಾಗಿರುವ ಮಾರುಕಟ್ಟೆಗೆ ಈಗ ಜಾಗತಿಕ ದೈತ್ಯನೊಬ್ಬನ ಪ್ರವೇಶ ಆಗಿದೆ.

ಈ ದೈತ್ಯ, ಜಾಗತಿಕ ಮೊಬೈಲ್ ಮಾರುಕಟ್ಟೆಯಲ್ಲಿ ಈಗಾಗಲೇ ಹೆಸರು ಮಾಡಿರುವ ಆ್ಯಪಲ್. ಐಫೋನ್, ಐಪ್ಯಾಡ್‌ನಂತಹ ಉತ್ಪನ್ನಗಳ ಮೂಲಕ ಬ್ರ್ಯಾಂಡ್ ಆಗಿ ಹೆಸರು ಸಂಪಾದಿಸಿರುವ ಆ್ಯಪಲ್ ಕಂಪನಿಯು, ಆ್ಯಪಲ್ ಟೀವಿ+ ಎನ್ನುವ ವಿಡಿಯೊ ಆನ್ ಡಿಮಾಂಡ್ ಸೇವೆ ಆರಂಭಿಸಿದೆ. ಭಾರತದಲ್ಲಿ ಈ ಸೇವೆಯ ಶುಲ್ಕವನ್ನು ಪ್ರತಿ ತಿಂಗಳಿಗೆ ₹ 99ಕ್ಕೆ ನಿಗದಿ ಮಾಡಿದೆ. ಈ ಮೂಲಕ, ಅಮೆಜಾನ್ ಪ್ರೈಮ್, ಹಾಟ್‌ಸ್ಟಾರ್ ಮತ್ತು ನೆಟ್‌ಫ್ಲಿಕ್ಸ್‌ಗಳಿಗೆ ಪೈಪೋಟಿ ನೀಡಲು ಮುಂದಾಗಿದೆ.

ಅಂದಹಾಗೆ, 'ಆ್ಯಪಲ್ ಟೀವಿ+'ನ ಪಯಣ ಭಾರತದಲ್ಲಿ ಸುಲಭವಾಗಿರಲಿದೆಯೇ? ಈ

